ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿ ಶ್ರೀ ಎಂ ಆರ್ ವಿ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅವುಗಳ ಬಗ್ಗೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿರುತ್ತವೆ.

ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಎನ್ ಜೆ ಪಿ ವಕೀಲರಿಂದಃ

ನನ್ನದು ಮತ್ತು ಮೃತ ಕರಿಯಪ್ಪನದು ಒಂದೇ ಊರು. ಆತ ನನಗೆ ಸಂಬಂಧಿಕನಾಗಬೇಕು. ಮೃತ ಕರಿಯಪ್ಪನ ತಂದೆ ತಾಯಿ ಅಂದರೆ ಅರ್ಜಿದಾರ 3 ಮತ್ತು 4 ರವರು ಬೇರೆ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ನಾನು ಆ ದಿವಸ ಕುಡುತಿನಿಗೆ ಹೋಗಿ ರಾತ್ರಿ ಬೈಕ್‌ನಲ್ಲಿ ವಾಪಾಸ್ಸು ಬರುತ್ತಿದ್ದೆ. ನನ್ನ ಮತ್ತು ಮೃತ ಕರಿಯಪ್ಪ ನ ನಡುವೆ ಸುಮಾರು 20 ಅಡಿ ದೂರ ಅಂತರ ಇತ್ತು. ರಸ್ತೆಯ ಅಗಲ ಸುಮಾರು 40 ಅಡಿ ಎಂದರೆ ಇರಬಹುದು ಎಂದು ಸಾಕ್ಷಿ ಹೇಳಿರುತ್ತಾರೆ. ಸದರಿ ರಸ್ತೆ ಡಾಂಬರ್ ರಸ್ತೆಯಾಗಿತ್ತು. ಅಕ್ಕಪಕ್ಕದಲ್ಲಿ ಕಚ್ಚಾ ರಸ್ತೆ ಇತ್ತು. ನನಗೆ ನನ್ನ ಪ್ರಮಾಣ ಪತ್ರದಲ್ಲಿನ ಸಂಗತಿಗಳ ಬಗ್ಗೆ ಮಾಹಿತಿ ಇದೆ. ಟ್ರ್ಯಾಕ್ಟರ್ ಟ್ರೇಲರ್ ನ ಇಂಜೀನ್ ಮುಂದೆ ಇರುತ್ತದೆ. ನಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ. ನಾನು ಪೋಲೀಸರ ಮುಂದೆ ಕರಿಯಪ್ಪ ಮೋಟಾರ್ ಸೈಕಲ್‌ನ್ನು ಜೋರಾಗಿ ನಡೆಸಿಕೊಂಡು ಬಂದು ಟ್ರ್ಯಾಕ್ಟರ್ ಗೆ ಡಿಕ್ಕಿ ಹೊಡೆದಿದ್ದ ಎಂದು ನಾನು ಪೋಲಿಸೀರ ಮುಂದೆ ಹೇಳಿದ್ದೇನೆ ಎಂದರೆ ಸಾಕ್ಷಿಯು ಡಿಕ್ಕಿ ಹೊಡೆದ ಬಗ್ಗೆ ಹೇಳಿದ್ದೇನೆ ಎಂದು ಆದರೆ ವೇಗವಾಗಿ ನಡೆಸಿ ಡಿಕ್ಕಿ ಹೊಡೆದಿದ್ದ ಎಂದು ಹೇಳಿಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿಯು ಪೋಲೀಸರ ಮುಂದಿನ ಹೇಳಿಕೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಆರ್ -1 ಎಂದು ಗುರುತಿಸಲಾಯಿತು. ನಾನು ಅಪಘಾತದ ಬಗ್ಗೆ ಮೃತನ ತಂದೆಗೆ ತಿಳಿಸಿದ್ದರಿಂದ ದೂರನ್ನು ಕೊಟ್ಟಿಲ್ಲ. ಟ್ರ್ಯಾಕ್ಟರ್ ನ್ನು ರಸ್ತೆಯ ಪಕ್ಕದಲ್ಲಿ ನಿಲ್ಲಿಸಲಾಗಿತ್ತು ಎಂದರೆ ಸರಿಯಲ್ಲ. ಅದಕ್ಕೆ ಇಂಡಿಕೇಟರ್ ಲೈಟ್ ಹಾಕಲಾಗಿತ್ತು ಮತ್ತು ಅದರ ಸುತ್ತಲೂ ಕಲ್ಲುಗಳನ್ನು ಇಡಲಾಗಿತ್ತು ಎಂದರೆ ಸರಿಯಲ್ಲ. ಮೃತನಿಗೆ ಕುಡಿಯುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ಆ ದಿವಸ ಕರಿಯಪ್ಪ ಕುಡಿದು ಬಂದು ಬೈಕ್‌ನ್ನು ಜೋರಾಗಿ ನಡೆಸಿ ತಾನೇ ಟ್ರ್ಯಾಕ್ಟರ್ ಗೆ ಡಿಕ್ಕಿ ಹೊಡೆಸಿ ಅಪಘಾತ ಮಾಡಿಕೊಂಡಿದ್ದ ಎಂರೆ ಸರಿಯುಲ್ಲ. ಅಪಘಾತವು ಕರಿಯಪ್ಪನ ತಪ್ಪಿನಿಂದ ಆಗಿತ್ತು ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡಿಲ್ಲದೇ ಇದ್ದರೂ ಸಹ ಕರಿಯಪ್ಪ ನನ್ನ ಸಂಬಂಧಿಕನಾಗಿರುವುದರಿಂದ ಆತನ ಕುಟುಂಬದವರಿಗೆ ಪರಿಹಾರ ಸಿಗಲಿ ಎಂಬ ಕಾರಣದಿಂದಾಗಿ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**